

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 15-02-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸುವ ಸಹಾಬರಲ್ಲಿ ಪ್ರಥಮ ಹೆಸರು ಹಝ್ರತ್ ಖಾಲಿದ್ ಬಿನ್ ಖೈಸ್(ರ) ಅವರದಾಗಿದೆ. ಅವರು ಖಝ್ರಜ್ ಗೋತ್ರದ ಬನೂ ಬಯಾಝ ಶಾಖೆಗೆ ಸೇರಿದವರಾಗಿದ್ದರು. ಅವರ ಪಿತ ಖೈಸ್ ಬಿನ್ ಮಾಲಿಕ್ ಮತ್ತು ಮಾತೆ ಸಲ್ಮಾ ಬಿನ್ತ್ ಹಾರಿಸ. ಅವರು ಬೈಅತೆ ಅಖಬದಲ್ಲಿ ಭಾಗವಹಿಸಿದ ಎಪ್ಪತ್ತು ಅನ್ಸಾರ್ ಸಹಾಬರಲ್ಲಿ ಒಬ್ಬರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಎರಡನೆಯ ಸಹಾಬಿ ಹಝ್ರತ್ ಹಾರಿಸ್ ಬಿನ್ ಖಝ್ಮ(ರ). ಅವರು ಅನ್ಸಾರಿಯಾಗಿದ್ದರು. ಅವರ ಉಪನಾಮ ಅಬುಲ್ ಬಶರ್ ಎಂದಾಗಿತ್ತು. ಅವರು ಖಝ್ರಜ್ ಗೋತ್ರದವರಾಗಿದ್ದರು. ಬನೂ ಅಬ್ದುಲ್ ಅಶ್ಹಲ್ ಗೋತ್ರದೊಂದಿಗೆ ಪ್ರತಿಜ್ಞಾಬದ್ಧ ಸಂಬಂಧ ಹೊಂದಿದ್ದರು. ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದ್ದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಯಾಸ್ ಬಿನ್ ಬುಕೈರ್‌ರೊಂದಿಗೆ ಅವರಿಗೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ತಬೂಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂಟೆ ಕಾಣೆಯಾದಾಗ ಕಪಟ ವಿಶ್ವಾಸಿಗಳು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಹೀಗೆ ಆಕ್ಷೇಪಿಸಿದರು: ತನ್ನ ಒಂಟೆಯ ಬಗ್ಗೆ ಸಮಾಚಾರ ತಿಳಿಯದವನು ಆಕಾಶದಿಂದ ಸಮಾಚಾರವನ್ನು ಹೇಗೆ ತಿಳಿಯುತ್ತಾನೆ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ವಿಷಯ ತಿಳಿದಾಗ ಅವರು ಹೇಳಿದರು: ಅಲ್ಲಾಹನು ನನಗೆ ಯಾವ ವಿಷಯಗಳ ಬಗ್ಗೆ ಸಮಾಚಾರ ನೀಡುತ್ತಾನೋ ಆ ವಿಷಯ ಮಾತ್ರ ನನಗೆ ತಿಳಿದಿರುತ್ತವೆ. ಈಗ ಅಲ್ಲಾಹನು ನನಗೆ ಒಂಟೆಯ ಕುರಿತು ತಿಳಿಸಿದನು, ಆ ಒಂಟೆ ಕಣಿವೆಯ ಇಂತಿಂತಹ ಇಳುಕಲ್ಲಿನಲ್ಲಿದೆ ಎಂದು. ಆಗ ಹಝ್ರತ್ ಹಾರಿಸ್ ಬಿನ್ ಖಝ್ಮ(ರ) ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸೂಚಿಸಿದ ಸ್ಥಳಕ್ಕೆ ಹೋಗಿ ಒಂಟೆಯನ್ನು ಹುಡುಕಿ ತಂದರು. ಅವರು ಹಿಜರಿ ವರ್ಷ 40ರಲ್ಲಿ ಹಝ್ರತ್ ಅಲಿ(ರ) ಅವರ ಖಿಲಾಫತ್ ಕಾಲದಲ್ಲಿ 67ನೇ ವರ್ಷ ಪ್ರಾಯದಲ್ಲಿ ಮದೀನದಲ್ಲಿ ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಖನೀಸ್ ಬಿನ್ ಹುಝಾಫ(ರ). ಅವರ ಉಪನಾಮ ಅಬೂ ಹುಝಾಫ ಎಂದು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್‌ಗೆ ಹೋಗುವ ಮೊದಲೇ ಅವರು ಮುಸ್ಲಿಮರಾಗಿದ್ದರು. ಅಬಿಸೀನಿಯಾ ದೇಶಕ್ಕೆ ಎರಡನೆಯ ಸಾರಿ ಹಿಜ್‌ರತ್ ಮಾಡಿದವರಲ್ಲಿ ಅವರು ಸೇರಿದ್ದರು. ಮದೀನಕ್ಕೆ ಹಿಜ್‌ರತ್ ಮಾಡಿದಾಗ ಅವರು ಹಝ್ರತ್ ರಿಫಾಅ್ ಬಿನ್ ಅಬ್ದುಲ್ ಮುಂಝಿರ್ ಜೊತೆ ವಾಸಿಸಿದರು. ಹಝ್ರತ್ ಖನೀಸ್ ಮತ್ತು ಅಬೂ ಅಬಸ್ ಬಿನ್ ಜಬರ್ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು. ಉಮ್ಮುಲ್ ಮೂಮಿನೀನ್ ಹಝ್ರತ್ ಹಫ್ಸರವರು ಹಝ್ರತ್ ಖನೀಸ್‌ರನ್ನು ಮೊದಲು ವಿವಾಹವಾಗಿದ್ದರು.

ಹಝ್ರತ್ ಖನೀಸ್(ರ) ಬದರ್ ಯುದ್ಧದ ನಂತರ ಮದೀನಕ್ಕೆ ಮರಳಿದಾಗ ರೋಗಬಾಧಿತರಾಗಿ ಅದರಲ್ಲೇ ಅವರು ಮೃತರಾದರು. ಅನಂತರ ಅವರ ವಿಧವೆ ಹಫ್ಸರನ್ನು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವಾಹವಾದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಖನೀಸ್‌ರ ಜನಾಝ ನಮಾಝ್ ನಿರ್ವಹಿಸಿದರು ಮತ್ತು ಜನ್ನತುಲ್ ಬಖೀಅ್ ಖಬರಸ್ಥಾನದಲ್ಲಿ ಹಝ್ರತ್ ಉಸ್ಮಾನ್ ಬಿನ್ ಮಝ್ಊನರ ಗೋರಿಯ ಬದಿಯಲ್ಲಿ ಅವರನ್ನು ದಫನಗೊಳಿಸಲಾಯಿತು.

ಇನ್ನೊಬ್ಬ ಸಹಾಬಿ ಹಝ್ರತ್ ಹಾರಿಸ ಬಿನ್ ನುಅ್‌ಮಾನ್(ರ). ಅವರ ಉಪನಾಮ ಅಬೂ ಅಬ್ದುಲ್ಲಾ. ಅವರು ಅನ್ಸಾರ್‌ಗಳ ಖಝ್ರಜ್ ಗೋತ್ರದ ಬನೂ ನಜ್ಜಾರ್ ಶಾಖೆಗೆ ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲ ಯುದ್ಧಗಳಲ್ಲಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಭಾಗವಹಿಸಿದ್ದರು. ಅವರು ಹಿರಿಯ ಸಹಾಬರಲ್ಲಿ ಸೇರಿದ್ದರು. ಹಝ್ರತ್ ಇಬ್ನು ಅಬ್ಬಾಸ್ ಹೇಳುತ್ತಾರೆ: ಹಝ್ರತ್ ಹಾರಿಸ ಬಿನ್ ನುಅ್‌ಮಾನ್(ರ) ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪದಿಂದ ದಾಟಿಹೋಗುವಾಗ ಹಝ್ರತ್ ಜಿಬ್ರೀಲ್ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪದಲ್ಲಿ ಕುಳಿತು ಮೆಲ್ಲಗೆ ಮಾತನಾಡುತ್ತಿದ್ದರು. ಹಾರಿಸ ಸಲಾಮ್ ಹೇಳದೆ ದಾಟಿಹೋದರು. ಜಿಬ್ರೀಲ್ ಕೇಳಿದರು ಅವರು ಏಕೆ ಸಲಾಮ್ ಹೇಳಲಿಲ್ಲ. ಅನಂತರ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಾರಿಸರೊಂದಿಗೆ ಕೇಳಿದರು: ನೀವು ಏಕೆ ಸಲಾಮ್ ಹೇಳಲಿಲ್ಲ. ಹಝ್ರತ್ ಹಾರಿಸ ಹೇಳಿದರು: ನಾನು ನಿಮ್ಮ ಬಳಿ ಒಬ್ಬ ವ್ಯಕ್ತಿಯನ್ನು ಕುಳಿತಿರುವುದಾಗಿ ಕಂಡೆ. ನೀವು ಅವರೊಂದಿಗೆ ಮೆಲ್ಲಗೆ ಮಾತನಾಡುತ್ತಿರುವುದಾಗಿ ಕಂಡೆನು. ನಿಮ್ಮ ಮಾತನ್ನು ತಡೆಯಲು ನಾನು ಇಚ್ಛಿಸಲಿಲ್ಲ.

ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ನನ್ನ ಹತ್ತಿರ ಕುಳಿತಿದ್ದ ವ್ಯಕ್ತಿಯನ್ನು ನೀವು ನೋಡಿರುವಿರೋ? ಹಝ್ರತ್ ಹಾರಿಸ(ರ) ಹೌದೆಂದು ಹೇಳಿದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆ ವ್ಯಕ್ತಿ ಜಿಬ್ರೀಲ್ ಆಗಿದ್ದರು. ಅವರು ಹೇಳಿದ್ದರು: ಆ ವ್ಯಕ್ತಿ ಸಲಾಮ್ ಹೇಳಿದ್ದರೆ ನಾನು ಉತ್ತರ ನೀಡುತ್ತಿದ್ದೆ. ಅನಂತರ ಜಿಬ್ರೀಲ್ ಹೇಳಿದರು: ಆ ವ್ಯಕ್ತಿ ಎಂಬತ್ತು ಜನರಲ್ಲಿ ಒಬ್ಬರು ಎಂದು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀವು ಹೇಳಿದ ಮಾತಿನ ಅರ್ಥವೇನು? ಆಗ ಜಿಬ್ರೀಲ್ ಹೇಳಿದರು: ಹುನೈನ್ ಯುದ್ಧದ ಸಂದರ್ಭದಲ್ಲಿ ನಿಮ್ಮೊಂದಿಗೆ ಸ್ಥಿರ ಹೆಜ್ಜೆಯೊಂದಿಗಿದ್ದ ಎಂಬತ್ತು ಜನರಲ್ಲಿ ಒಬ್ಬರಾಗಿದ್ದಾರೆ. ಅವರ ಆಹಾರ ಮತ್ತು ಅವರ ಮಕ್ಕಳ ಆಹಾರದ ಹೊಣೆಗಾರಿಕೆ ಸ್ವರ್ಗದಲ್ಲಿ ಅಲ್ಲಾಹನು ವಹಿಸಿಕೊಂಡಿದ್ದಾನೆ.

ಇನ್ನೊಬ್ಬ ಸಹಾಬಿ ಹಝ್ರತ್ ಬಶೀರ್ ಬಿನ್ ಸಅದ್(ರ). ಅವರ ಉಪನಾಮ ಅಬೂ ನುಅ್‌ಮಾನ್. ಅವರ ಪಿತ ಸಅದ್ ಬಿನ್ ಸಅಲಬ. ಅವರು ಖಝ್ರಜ್ ಗೋತ್ರದವರು. ಅಜ್ಞಾನ ಕಾಲದಲ್ಲಿಯೂ ಅವರು ಓದಲು ಬರೆಯಲು ಕಲಿತಿದ್ದರು. ಬೈಅತ್ ಅಖಬ ಸಾನಿಯದಲ್ಲಿ ಭಾಗವಹಿಸಿದ ಎಪ್ಪತ್ತು ಅನ್‌ಸಾರ್‌ಗಳಲ್ಲಿ ಅವರು ಒಬ್ಬರಾಗಿದ್ದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದ್ದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ ವರ್ಷ 7 ಶಅಬಾನ್ ತಿಂಗಳಲ್ಲಿ ಹಝ್ರತ್ ಬಶೀರ್ ಬಿನ್ ಸಅದರ ನೇತೃತ್ವದಲ್ಲಿ ಮೂವತ್ತು ಜನರ ಒಂದು ಸೇನಾದಳವನ್ನು ಫಿದಕ್ ಬಿನ್ ಮರ್ರ ಗೋತ್ರದ ವಿರುದ್ಧ ಕಳುಹಿಸಿದ್ದರು. ಅದೇ ರೀತಿ ಹಿಜರಿ ವರ್ಷ 7 ಶವ್ವಾಲ್ ತಿಂಗಳಲ್ಲಿ ಹಝ್ರತ್ ಬಶೀರ್ ಬಿನ್ ಸಅದರೊಂದಿಗೆ ಮುನ್ನೂರು ಜನರನ್ನು ಯಮನ್ ಮತ್ತು ಸುತ್ತುಮುತ್ತಲಿನ ಪ್ರದೇಶಕ್ಕೆ ಕಳುಹಿಸಿದ್ದರು. ಅಲ್ಲಿ ಗತ್‌ಫಾನ್ ಗೋತ್ರದ ಕೆಲವರು ಈಯೀನ ಬಿನ್ ಹನ್‌ಸಲ್ ಫರಾದಿಯ ನೇತೃತ್ವದಲ್ಲಿ ಒಟ್ಟು ಸೇರಿ ಇಸ್ಲಾಮ್ ವಿರುದ್ಧ ಯೋಜನೆಗಳನ್ನು ರೂಪಿಸುತ್ತಿದ್ದರು. ಹಝ್ರತ್ ಬಶೀರರು ಅವರನ್ನು ಎದುರಿಸಿ ಅವರನ್ನು ಚದುರಿ ಹೋಗುವಂತೆ ಮಾಡಿದರು.

ಒಂದು ವರದಿಯಲ್ಲಿ ಬಂದಿರುವಂತೆ ಹಝ್ರತ್ ನುಅ್‌ಮಾನ್ ಬಿನ್ ಬಶೀರ್ ಹೇಳುತ್ತಾರೆ: ನನ್ನ ತಂದೆಯವರು ತನ್ನ ಸ್ವಲ್ಪ ಸಂಪತ್ತು ನನಗೆ ಕೊಟ್ಟರು. ಆಗ ನನ್ನ ತಾಯಿ ಹೇಳಿದರು, ಈ ಹಣಕೊಟ್ಟ ಬಗ್ಗೆ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಾಕ್ಷಿಯಾಗಿ ಮಾಡುವ ತನಕ ನಾನು ಒಪ್ಪಲಾರೆ. ಹಾಗೆ ಅವರು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ನನಗೆ ನೀಡಿದ ಸಂಪತ್ತಿನ ಬಗ್ಗೆ ಅವರನ್ನು ಸಾಕ್ಷಿಯನ್ನಾಗಿ ಮಾಡಲು ಬಯಸಿದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ನಿಮ್ಮ ಎಲ್ಲಾ ಮಕ್ಕಳೊಂದಿಗೆ ಹೀಗೆಯೇ ಮಾಡಿರುವಿರೋ. ಇಲ್ಲ ಎಂದು ನನ್ನ ತಂದೆ ಹೇಳಿದರು. ಆಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ತಖ್ವವನ್ನು ಅವಲಂಬಿಸಿರಿ. ನಿಮ್ಮ ಮಕ್ಕಳೊಂದಿಗೆ ನ್ಯಾಯಪೂರ್ಣವಾಗಿ ವರ್ತಿಸಿರಿ. ನನ್ನ ತಂದೆಯವರು ಮರಳಿ ಬಂದು ನನ್ನಿಂದ ನನಗೆ ನೀಡಿದುದನ್ನು ಹಿಂದಿರುಗಿ ಪಡೆದುಕೊಂಡರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು: ನನ್ನನ್ನು ಸಾಕ್ಷಿಯನ್ನಾಗಿ ಮಾಡಬೇಡಿರಿ. ಏಕೆಂದರೆ ನಾನು ದೌರ್ಜನ್ಯಕ್ಕೆ ಸಂಬಂಧಿಸಿ ಸಾಕ್ಷಿಯಾಗಲಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ವಿಷಯದ ಬಗ್ಗೆ ವಿಶದೀಕರಿಸುತ್ತಾ ಹೇಳಿದರು: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಉಪದೇಶ ಮಹತ್ವಪೂರ್ಣ ವಸ್ತುಗಳಿಗೆ ಸಂಬಂಧಿಸಿದೆ. ಚಿಕ್ಕಪುಟ್ಟ ವಸ್ತುಗಳಿಗೆ ಇದು ಅನ್ವಯಿಸುವುದಿಲ್ಲ.

(ಹಝೂರ್ ಈ ವಿಷಯದ ಬಗ್ಗೆ ಇನ್ನಷ್ಟು ವಿಶದೀಕರಿಸುತ್ತಾ ಹೇಳಿದರು:) ಒಬ್ಬ ಹುಡುಗನ ಅನ್ವೇಷಣೆ ಈ ರೀತಿಯಿತ್ತು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವನ ತಂದೆಯೊಂದಿಗೆ ನೀವು ಅವನಿಗೂ ಆ ವಸ್ತು ಕೊಡಿರಿ, ಅಥವಾ ನೀವು ಯಾರಿಗೆ ಕೊಟ್ಟದ್ದೀರೋ ಅವನಿಂದ ತೆಗೆದುಕೊಳ್ಳಿರಿ ಎಂದು ಯಾಕೆ ಹೇಳಿದರು? ಇದರಲ್ಲಿ ಅಡಕವಾದ ತತ್ವವೇನೆಂದರೆ ಮಕ್ಕಳು ತಂದೆ ತಾಯಂದಿರನ್ನು ಅನುಸರಿಸುವುದು ಫರ್ಝ್ ಆಗಿರುವ ಹಾಗೆಯೇ ತಂದೆ ತಾಯಂದಿರು ಮಕ್ಕಳೊಂದಿಗೆ ಸಮಾನವಾಗಿ ವರ್ತಿಸುವುದು ಮತ್ತು ಪ್ರೀತಿಸುವುದು ಸಹ ಫರ್ಝ್ ಆಗಿದೆ. ತಂದೆ ತಾಯಂದಿರು ಪಕ್ಷಪಾತದಿಂದ ವರ್ತಿಸುವುದಾದರೆ ಮಕ್ಕಳು ತಮ್ಮ ಫರ್ಝ್ ಬಗ್ಗೆ ಪ್ರಾಯಶಃ ಮುಖ ತಿರುಗಿಸದಿದ್ದರೂ ಅವರು ತಮ್ಮ ತಂದೆ ತಾಯಂದಿರ ಸೇವೆ ಮಾಡುವುದರಲ್ಲಿ ಸಂತೋಷ ಪಡಲಾರರು. ಕೆಲವು ತಂದೆ ತಾಯಂದಿರ ಈ ರೀತಿಯ ವರ್ತನೆ ಮಕ್ಕಳಿಗೆ ಹಾನಿಕರವೂ ಪ್ರೀತಿಯನ್ನು ನಾಶ ಮಾಡುವುದೂ ಆಗಿದೆ. ಆದುದರಿಂದ ಇಸ್ಲಾಮ್ ಅದನ್ನು ನಿಷಿದ್ಧಗೊಳಿಸಿದೆ. ಆದುದರಿಂದ ದಾನ ಮತ್ತು ವಸಿಯ್ಯತ್ ಕೆಲವು ಮಕ್ಕಳಿಗೆ ಮಾತ್ರ ಆಗಬಾರದು. ಕೆಲವು ಸಾರಿ ಸ್ಥಿತಿಗತಿಗಳು ಹೇಗಿರುತ್ತವೆ ಎಂದರೆ ಹಿರಿಯ ಮಗನಿಗೆ ಉನ್ನತ ವಿದ್ಯಾಭ್ಯಾಸ ನೀಡಲಾಗುತ್ತದೆ. ಆದರೆ ಅನಂತರ ಉದ್ಯೋಗ ಕಳೆದುಕೊಂಡ ಕಾರಣ ಅಥವಾ ಸಂಪಾದನೆ ಕಡಿಮೆಯಾದ ಕಾರಣ ಚಿಕ್ಕ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ನೀಡಲು ಸಾಧ್ಯವಾಗದಿದ್ದರೆ ಅದರ ಬಗ್ಗೆ ಆಕ್ಷೇಪಿಸಲು ಸಾಧ್ಯವಿಲ್ಲ. ಆದರೆ ಒಬ್ಬ ತಂದೆ ತನ್ನ ಹಿರಿಯ ಮಗನಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟು ವ್ಯಾಪಾರ ಮಾಡು ಎಂದು ಹೇಳಿ ಅವನ ತಮ್ಮನಿಗೆ ಏನನ್ನೂ ಕೊಡದಿದ್ದರೆ ಅದು ತಪ್ಪು ಮತ್ತು ತಾರತಮ್ಯದ ವರ್ತನೆಯಾಗುತ್ತದೆ.

ಹಝ್ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರ ಖಿಲಾಫತ್ ಕಾಲದಲ್ಲಿ ಹಿಜರಿ ವರ್ಷ 12ರಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದರ ನೇತೃತ್ವದಲ್ಲಿ ನಡೆದ ಐನುತ್ತಮರ್ ಯುದ್ಧದಲ್ಲಿ ಭಾಗವಹಿಸಿ ಹಝ್ರತ್ ಬಶೀರ್ ಬಿನ್ ಸಅದ್(ರ) ಶಹೀದರಾದರು. ಹಝ್ರತ್

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ ವರ್ಷ 7ರ ಝಿಲ್‌ಖಅದ ತಿಂಗಳಲ್ಲಿ ಉಮ್ರ ಖಝಾ ನಿರ್ವಹಿಸಲು ಪ್ರಯಾಣಿಸಿದಾಗ ಅವರು ಆಯುಧಗಳನ್ನು ಮುಂದೆ ಕಳುಹಿಸಿದ್ದರು. ಅವುಗಳ ಮೇಲ್ವಿಚಾರಣೆಗೋಸ್ಕರ ಹಝ್ರತ್ ಬಶೀರ್ ಬಿನ್ ಸಅದ್ ನೇಮಿಸಲ್ಪಟ್ಟಿದ್ದರು.

(ಉಮ್ರ ಖಝಾ ಇದರ ಬಗ್ಗೆ ವಿವರಣೆ ನೀಡುತ್ತಾ ಹುಝೂರ್ ಹೇಳಿದರು:) ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಅವರ ಸಂಗಡಿಗರನ್ನೂ ಉಮ್ರ ಮಾಡುವುದರಿಂದ ತಡೆಯಲಾಗಿತ್ತು. ಆಗ ನಿಶ್ಚಯಿಸಲಾದ ಶರತ್ತುಗಳಲ್ಲಿ ಒಂದು ಶರತ್ತು ಹೀಗಿತ್ತು. ಮುಂದಿನ ವರ್ಷ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಂಗಡಿಗರೊಂದಿಗೆ ಉಮ್ರ ನಿರ್ವಹಿಸಬಹುದು ಎಂದು. ಆದುದರಿಂದ ಹಿಜರಿ ವರ್ಷ 7ರ ಝಿಲ್‌ಖಅದ ತಿಂಗಳಲ್ಲಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ 2000 ಸಹಾಬರೊಂದಿಗೆ ಉಮ್ರ ನಿರ್ವಹಿಸಿದರು. ಅವರು ಕಅಬದ ಪ್ರದಕ್ಷಿಣೆ ಮಾಡುವುದನ್ನು ನೋಡಿದಾಗ ಅವಿಶ್ವಾಸಿಗಳಿಗೆ ಸಹಿಸಲಾಗಲಿಲ್ಲ. ಅವರು ಬೆಟ್ಟಗಳಿಗೆ ಹೋದರು. ಕೆಲವರು ವ್ಯಂಗ್ಯವಾಗಿ ಹೇಳುತ್ತಿದ್ದರು: ಅವರು ಹೇಗೆ ತಾನೆ ಪ್ರದಕ್ಷಿಣೆ ಮಾಡಬಲ್ಲರು ಮದೀನದಲ್ಲಿ ಹಸಿವು ಮತ್ತು ಜ್ವರ ಅವರನ್ನು ಬಲಹೀನರನ್ನಾಗಿ ಮಾಡಿದೆ.

ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಹೇಳಿದರು: ನೀವು ನಿಮ್ಮ ಶಕ್ತಿಯನ್ನು ಪ್ರದರ್ಶಿಸಿರಿ. ನೀವು ಚಾದರವನ್ನು ಹೇಗೆ ಶರೀರಕ್ಕೆ ಕಟ್ಟಬೇಕೆಂದರೆ ನಿಮ್ಮ ಬಲಿಷ್ಠ ಭುಜಗಳು ಕಾಣಿಸಲಿ. ನೀವು ಭುಜಗಳನ್ನು ಚೆನ್ನಾಗಿ ಅಲ್ಲಾಡಿಸುತ್ತಾ ಪ್ರದಕ್ಷಿಣೆ ಮಾಡಿರಿ. ಇದನ್ನು ಅರಬಿಯಲ್ಲಿ ರಮಲ್ ಎಂದು ಹೇಳುತ್ತಾರೆ. ಈ ಸುನ್ನತ್ ಈಗ ಸಹ ಜಾರಿಯಲ್ಲಿದೆ. ಖಿಯಾಮತ್ ತನಕ ಅದು ಮುಂದುವರಿಯುವುದು. ವರದಿಗಳ ಪ್ರಕಾರ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೀವಿತ ಕಾಲದಲ್ಲಿ ನಾಲ್ಕು ಉಮ್ರಗಳನ್ನೂ ಒಂದು ಹಜ್ಜನ್ನೂ ನಿರ್ವಹಿಸಿದ್ದರು ಎಂದು ತಿಳಿದು ಬರುತ್ತದೆ.

ಹಝ್ರತ್ ಬಶೀರ್ ಬಿನ್ ಸಅದ್ **ಸಖೀಫ ಬನೂಸಾಯಿದ** ದಿವಸ ಹಝ್ರತ್ ಅಬೂಬಕರ್ ಸಿದ್ದೀಖರನ್ನು ಬೈಅತ್ ಮಾಡಿದ ಪ್ರಥಮ ಅನ್‌ಸಾರ್ ಸಹಾಬಿಯಾಗಿದ್ದರು. ಸಖೀಫ ಬನೂಸಾಯಿದ ಎಂದರೇನು? (ಇದರ ಬಗ್ಗೆ ಹುಝೂರ್ ಹೀಗೆ ವಿವರಣೆ ನೀಡಿದರು:) ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಅವರ ಉತ್ತರಾಧಿಕಾರಿ ಯಾರಾಗಬೇಕೆಂಬ ಬಗ್ಗೆ ಸಖೀಫ ಬನೂಸಾಯಿದದಲ್ಲಿ ಬನೂ ಖಝ್ರಜ್ ಗೋತ್ರದವರು ಸಭೆ ನಡೆಸಿದ್ದರು. ಅದರ ಬಗ್ಗೆ ಸಮಾಚಾರ ಹಝ್ರತ್ ಉಮರ್(ರ)ರಿಗೆ ನೀಡಲಾಯಿತು. ಕಪಟವಿಶ್ವಾಸಿಗಳು ಮತ್ತು ಅನ್‌ಸಾರ್‌ಗಳು ಯಾವುದಾದರೂ ಕಲಹ ಹಬ್ಬಲು ಕಾರಣವಾಗಬಹುದೆಂದು ಸಹ ಹೇಳಲಾಗಿತ್ತು. ಆಗ ಹಝ್ರತ್ ಉಮರ್ ಫಾರೂಖ್(ರ) ಹಝ್ರತ್ ಅಬೂಬಕರ್ ಸಿದ್ದೀಖರನ್ನು(ರ) ಕರೆದುಕೊಂಡು ಸಖೀಫ ಬನೀಸಾಯಿದಕ್ಕೆ ಹೋದರು. ಅಲ್ಲಿ ಹೋದಾಗ ತಿಳಿಯಿತು ಬನೂ ಖಝ್ರಜ್ ಉತ್ತರಾಧಿಕಾರವನ್ನು ತಮಗೆಂದು ವಾದಿಸುತ್ತಾರೆ ಮತ್ತು ಬನೂ ಔಸ್ ಅದನ್ನು ವಿರೋಧಿಸುತ್ತಾರೆಂದು. ಅಲ್ಲಿ ಒಬ್ಬ ಅನ್‌ಸಾರಿ ಸಹಾಬಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 'ಅಧಿಕಾರ ನಡೆಸುವವರು ಖುರೈಶಿಗಳಿಗೆ ಸೇರಿದವರೇ ಆಗಬೇಕು' ಎಂದು ಹೇಳಿದ ಮಾತನ್ನು ನೆನಪಿಸಿದರು. ಆಗ ಅಲ್ಲಿದ್ದ ಜನರಲ್ಲಿ ಬಹುತೇಕ ಜನರ ಹೃದಯಗಳಿಗೆ ಈ ಮಾತು ಹಿಡಿಸಿತು. ಅನ್‌ಸಾರ್‌ಗಳು ತಮ್ಮ ವಾದದಿಂದ ಹಿಂದೆ ಸರಿದರು. ಎಲ್ಲರೂ ತಕ್ಷಣ ಹಝ್ರತ್ ಅಬೂಬಕರ್(ರ)ರವರ ಖಿಲಾಫತ್‌ಗೆ ಬೈಅತ್ ಮಾಡಿದರು.

ಹಝ್ರತ್ ಅಬೂ ಮಸ್‌ಊದ್ ಅನ್‌ಸಾರಿ ಹೇಳುತ್ತಾರೆ: ನಾವು ಒಮ್ಮೆ ಸಅದ್ ಬಿನ್ ಉಬಾದರ ಸಭೆಯಲ್ಲಿದ್ದೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಸಭೆಗೆ ಆಗಮಿಸಿದರು. ಆಗ ಹಝ್ರತ್ ಬಶೀರ್ ಬಿನ್ ಸಅದ್ ಅವರೊಂದಿಗೆ ಕೇಳಿದರು: ನಿಮಗೆ ದುರೂದ್ ಪ್ರಾರ್ಥನೆ ಸಲ್ಲಿಸಬೇಕೆಂದು ಅಲ್ಲಾಹನು ನಮಗೆ ಆಜ್ಞಾಪಿಸಿದ್ದಾನೆ. ನಾವು ಯಾವ ರೀತಿ ದುರೂದ್ ಪ್ರಾರ್ಥನೆ ಮಾಡಬೇಕು ಎಂದು ಕೇಳಿದರು. ವರದಿಗಾರ ಹೇಳುತ್ತಾರೆ, ಈ ಪ್ರಶ್ನೆ ಆಲಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೌನವಾಗಿದ್ದರು. ಎಷ್ಟು ಹೊತ್ತು ಮೌನವಾಗಿದ್ದರು ಎಂದರೆ ನಾವು ಯೋಚಿಸಿದೆವು ಅವರೊಂದಿಗೆ ಈ ಪ್ರಶ್ನೆ ಕೇಳದಿದ್ದರೆ ಉತ್ತಮವಾಗುತ್ತಿತ್ತು ಎಂದು. ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಹೀಗೆ ಪ್ರಾರ್ಥಿಸಿರಿ: **ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಆಲಿ ಇಬ್ರಾಹೀಮ, ವ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಆಲಿ ಇಬ್ರಾಹೀಮ ಫಿಲ್ ಆಲಮೀನ ಇನ್ನಕ ಹಮೀದುನ್ ಮಜೀದ್.** ಮತ್ತು ಸಲಾಮ್, ಅದು ಹೇಗೆ ಹೇಳಬೇಕೆಂದು ನೀವು ತಿಳಿದಿರುವಿರೋ ಹಾಗೆ ಸಲಾಮ್ ಹೇಳಿರಿ.

**ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವಬಾರಿಕ್ ವಸಲ್ಲಿಮ್ ಇನ್ನಕ ಹಮೀದುನ್ ಮಜೀದ್.**

ಒಂದು ಪ್ರಾರ್ಥನೆ ಮಾಡಬೇಕಾದ ಬಗ್ಗೆ ನಾನು ಹೇಳಲು ಬಯಸುತ್ತೇನೆ. ಕೆಲವು ದಿನಗಳ ಹಿಂದೆ ಬಂಗ್ಲಾದೇಶದಲ್ಲಿ ಗಲಬೆಕೋರರು ಅಹ್ಮದಿಯರ ಮನೆಗಳನ್ನೂ ಅಂಗಡಿಗಳನ್ನೂ ಆಕ್ರಮಿಸಿದರು. ಕೆಲವು ಮನೆಗಳನ್ನು ಸುಟ್ಟು ಹಾಕಿದ್ದಾರೆ. ಕೆಲವು ಅಂಗಡಿಗಳನ್ನು ಲೂಟಿ ಮಾಡಿ ಸುಟ್ಟು ಹಾಕಿದ್ದಾರೆ. ಕೆಲವು ಅಹ್ಮದಿಯರು ಗಾಯಗೊಂಡಿದ್ದಾರೆ. ಅಲ್ಲಿನ ಸ್ಥಿತಿಯನ್ನು ಸುಧಾರಣೆ ಮಾಡಲು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಗಾಯಗೊಂಡವರು ಬೇಗನೆ ಸುಖ ಗಳಿಸುವಂತೆ ಅಲ್ಲಾಹನು ಮಾಡಲಿ. ಅವರ ನಷ್ಟಗಳು ಸಹ ನಿವಾರಣೆಯಾಗುವಂತಾಗಲಿ. ಅವರಿಗೆ ಅಲ್ಲಿ ಶಾಂತಿಯಿಂದ ಜಲ್ಸ ನಡೆಸಲು ಸಾಧ್ಯವಾಗುವಂತಾಗಲಿ.

ಜುಮುಅ ನಮಾಝ್‌ಗಳ ನಂತರ ನಾನು ಒಂದು ಜನಾಝ ಗಾಯಿಬ್ ನಿರ್ವಹಿಸುವೆನು. ಪಾಕಿಸ್ಥಾನದ ದುನ್‌ಯಾಪುರ್ ನಿವಾಸಿ ಮುಕರ್ರಮ ಸಿದ್ದೀಖ ಬೇಗಮ್ ಸಾಹಿಬ. ಫೆಬ್ರವರಿ ದಿನಾಂಕ ಒಂದರಂದು 74ನೇ ಪ್ರಾಯದಲ್ಲಿ ಅವರು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ದಕ್ಷಿಣ ಅಮೇರಿಕದ ಮುಬಲ್ಲಿಗ್ ಇನ್‌ಚಾರ್ಜ್ ಲಯೀಕ್ ಅಹ್ಮದ್ ಮುಶ್‌ತಾಖ್ ಸಾಹಿಬ್‌ರವರ ಮಾತೆಯಾಗಿದ್ದಾರೆ. ಸೇಖ್ ಮುಝಫ್ಫರ್ ಅಹ್ಮದ್ ಸಾಹಿಬರ ಪತ್ನಿಯಾಗಿದ್ದರು. (ಮೃತರ ಸದ್ಗುಣಗಳನ್ನು ವಿವರಿಸುತ್ತಾ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ಅವರೊಂದಿಗೆ ಅಲ್ಲಾಹನು ವರ್ತಿಸಲೆಂದು ಹುಝೂರ್ ಪ್ರಾರ್ಥಿಸಿದರು.) ಅವರ ಪದವಿ ಅಲ್ಲಾಹನು ಉನ್ನತ ಗೊಳಿಸಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಅವರ ಮಕ್ಕಳಿಗೆ ಅಲ್ಲಾಹನು ಭಾಗ್ಯ ನೀಡಲಿ. ಅವರಿಗೋಸ್ಕರ ಮೃತರು ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 15-02-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon